ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 06-02-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ 2014-2015.<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br>ಪ್ರಾಸ್ತಾವಿಕ ನುಡಿ:<br><br>ಡಾ. ಎಲ್ ಹನುಮಂತಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.<br><br>ಹಿತನುಡಿ:<br><br>ಡಾ. ಚಂದ್ರಶೇಖರ ಕಂಬಾರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು,<br><br>ಶ್ರೀ ರೋಷನ್ ಬೇಗ್, ಮೂಲಭೂತ ಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು.<br><br>ಶ್ರೀ ಕಿಮ್ಮನೆ ರತ್ನಾಕರ, | 07-02-2015<br>ಶನಿವಾರ<br>ಬೆಳಗ್ಗೆ<br>10-30 ಗಂಟೆಗೆ | ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಂಗಳೂರು |

| | | | |
|---|---|---|---|
| | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. | | |
| 2. | ರೈಟ್ ಸಹೋದರರ ವಿಮಾನ ಅನುಕರಣೆ ವ್ಯವಸ್ಥೆ ಮತ್ತು ವಿಜ್ಞಾನ ಪ್ರಾತ್ಯಕ್ಷಿಕ ಕೋಣೆಯ ಉದ್ಘಾಟನಾ ಸಮಾರಂಭ .<br><br><u>ಉದ್ಘಾಟನೆ:</u><br><br>ಶ್ರೀ ಶ್ಯಾಮ್ ಚೆಟ್ಟಿ,<br>ನಿರ್ದೇಶಕರು,<br>ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ, ಬೆಂಗಳೂರು<br><br><u>ಅಧ್ಯಕ್ಷತೆ:</u><br><br>ಶ್ರೀ ಪಿ. ಎಸ್. ಕಾರ್ತೀಕೇಯನ್, ಪ್ರಾದೇಶಿಕ ಪಾಸ್ಪೋರ್ಟ್ ಅಧಿಕಾರಿ, ಬೆಂಗಳೂರು | 07-02-2015<br>ಶನಿವಾರ<br>ಬೆಳಗ್ಗೆ<br>11-00 ಗಂಟೆಗೆ | ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಅಂಚೆ ಪೆಟ್ಟಿಗೆ 5216, ಕಸ್ತೂರಬಾ ರಸ್ತೆ, ಬೆಂಗಳೂರು - 560 01 |
| 3. | ಕರ್ನಾಟಕ ರಾಜ್ಯ ಗೃಹರಕ್ಷಕ ದಳ, ಪೌರರಕ್ಷಣೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವೃತ್ತಿಪರ ಹಾಗೂ ಕ್ರೀಡಾಕೂಟ 2014-15 ಸಮಾರೋಪ ಸಮಾರಂಭ<br><br><u>ಬಹುಮಾನ ವಿತರಣೆ:</u><br><br>ಶ್ರೀ ಕೆ. ಜೆ. ಜಾರ್ಜ್,<br>ಗೃಹ ಸಚಿವರು<br><br><u>ಅಧ್ಯಕ್ಷತೆ:</u><br><br>ಶ್ರೀ ಓಂ. ಪ್ರಕಾಶ್, ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ, ನಿರ್ದೇಶಕರು, ಪೌರರಕ್ಷಣೆ ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ | 07-02-2015<br>ಶನಿವಾರ<br>ಮಧ್ಯಾಹ್ನ<br>4-00 ಗಂಟೆಗೆ | ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 029 |

| | | | |
|---|---|---|---|
| | ಮತ್ತು ತುರ್ತು ಸೇವೆಗಳು.<br><br><u>ಸಂಪರ್ಕ:</u><br><br>ಶ್ರೀ ಶಶಿಧರ್,<br>ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ.<br>ಮೊ.ಸಂ. 9480450668 | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲ ಸುದ್ದಿಗಳು:

# ರಾಜ್ಯದಲ್ಲಿ 1400 ಮೆ.ವ್ಯಾ. ನಿರ್ಬಂಧಿತ ವಿದ್ಯುತ್ ಕೊರತೆ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನ ಅಂದಾಜು 1400 ಮೆಗಾ ವ್ಯಾಟ್. ಗಳ ನಿರ್ಬಂಧಿತ ವಿದ್ಯುತ್ ಕೊರತೆಯಿದೆ. 2015 ರ ಏಪ್ರಿಲ್ ವೇಳೆಗೆ 800 ಮೆಗಾ ವ್ಯಾಟ್ ವಿದ್ಯುತ್ ಕೊರತೆ ಉಂಟಾಗಬಹುದು ಎಂದು ರಾಜ್ಯ ಇಂಧನ ಸಚಿವ ಶ್ರೀ ಡಿ.ಕೆ. ಶಿವಕುಮಾರ್ ಅವರು ಇಂದು ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಮಹಾಲಕ್ಷ್ಮೀಲೇಔಟ್ ಕ್ಷೇತ್ರದ ವಿಧಾನಸಭಾ ಸದಸ್ಯ ಶ್ರೀ ಗೋಪಾಲಯ್ಯ ಕೆ. ಅವರ ಪ್ರಶ್ನೆಗೆ ಉತ್ತರಿಸುತ್ತಿದ್ದರು.

ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಅನುಕೂಲವಾಗುವಂತೆ ಸಮರ್ಪಕ ವಿದ್ಯುತ್ ಪೂರೈಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ ಎಲ್ಲಾ ವಿದ್ಯುತ್ ಉತ್ಪಾದನಾ ಘಟಕಗಳು ಹೆಚ್ಚಿನ ಕಾರ್ಯಕ್ಷಮತೆಯಿಂದ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಗ್ರಾಮೀಣಾ ಪ್ರದೇಶಗಳಲ್ಲಿ ನೀರಾವರಿ ಪಂಪ್ ಸೆಟ್‌ಗಳನ್ನು ಅಧಿಕ ಹೊರೆ ರಹಿತ ಸಮಯದಲ್ಲಿ ಉಪಯೋಗಿಸುವಂತೆ ರೈತರಿಗೆ ಕೋರಲಾಗಿದೆ. ರಾಜ್ಯದಲ್ಲಿ ಘೋಷಿತ ಅವಧಿಯಂತೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ದಿನವಹಿ 22 ರಿಂದ 24 ಗಂಟೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 7 ಗಂಟೆಗಳ ಮೂರು ಫೇಸ್ ವಿದ್ಯುತ್ ಹಾಗೂ ಸಂಜೆ 6–00 ರಿಂದ ಬೆಳಿಗ್ಗೆ 6–00 ರವರೆಗೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಮಧ್ಯಮ ಅವಧಿ ಮತ್ತು ಅಲ್ಪಾವಧಿ ಆಧಾರದಲ್ಲಿ ವಿದ್ಯುತ್‌ನ್ನು ಖರೀದಿಸಲಾಗುತ್ತಿದೆ ಎಂದು ಸಚಿವರು ಉತ್ತರಿಸಿದರು.

ಬಾಬು:ಜಿಪಿಆರ್.

# ಛಾವಣಿ ಮೇಲೆ ಸೌರ ವಿದ್ಯುತ್ ಉತ್ಪಾದನಾ ಫಲಕ ಸ್ಥಾಪನೆ ಜಾರಿ

**ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ವಸತಿ ಗೃಹಗಳು, ವಾಣಿಜ್ಯ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕೆಗಳಲ್ಲಿನ ಛಾವಣಿ ಮೇಲೆ ಸೌರ ವಿದ್ಯುತ್ ಉತ್ಪಾದನಾ ಫಲಕಗಳನ್ನು ಸ್ಥಾಪಿಸಿ ಅದರ ಮೂಲಕ ವಿದ್ಯುತ್‌ನ್ನು ಉತ್ಪಾದಿಸುವ ಯೋಜನೆಯನ್ನು 2014 ರ ನವೆಂಬರ್ 7 ರಿಂದ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪೆನಿಗಳಲ್ಲಿ ಜಾರಿಗೊಳಿಸಲಾಗಿದೆ ಎಂದು ರಾಜ್ಯದ ಇಂಧನ ಸಚಿವ ಶ್ರೀ ಡಿ. ಕೆ. ಶಿವಕುಮಾರ್ ವಿಧಾನಸಭೆಗೆ ಇಂದು ತಿಳಿಸಿದರು.

ಅವರು ಇಂದು ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಬೀದರ್ ಶಾಸಕ ಡಾ. ಗುರುಪಾದಪ್ಪ ನಾಗಮಾರಪಲ್ಲಿ ಅವರ ಪರವಾಗಿ ಶಾಸಕ ಶ್ರೀ ಪಾಟೀಲ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದರು.

ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಅರ್ಜಿದಾರರು ಆಯಾಯ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಗೃಹ/ವಾಣಿಜ್ಯ/ಶಿಕ್ಷಣ/ಕೈಗಾರಿಕಾ ಸ್ಥಾವರಗಳ ಗ್ರಾಹಕರಾಗಿದ್ದು, ಆ ಸ್ಥಾವರದ ಕಟ್ಟಡದ ಮೇಲೆ ಲಭ್ಯವಿರುವ ಮೇಲ್ಛಾವಣಿ ವಿಸ್ತೀರ್ಣಕ್ಕನುಗುಣವಾಗಿ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಬಹುದಾಗಿರುತ್ತದೆ. (1 ಕೆ.ವ್ಯಾ ಸಾಮರ್ಥ್ಯದ ಸೌರಶಕ್ತಿ ಮೇಲ್ಛಾವಣಿ ಘಟಕವನ್ನು ಅಳವಡಿಸಲು ಮೇಲ್ಛಾವಣಿಯಲ್ಲಿ ಅಂದಾಜು 100 ಚ.ಅ. ಜಾಗದ ಅವಶ್ಯಕತೆ ಇರುತ್ತದೆ)

ಸೌರಶಕ್ತಿ ಮೇಲ್ಛಾವಣಿ ಘಟಕಗಳಲ್ಲಿ ಸೌರಶಕ್ತಿ ಫಲಕಗಳಿಂದ ಉತ್ಪಾದಿಸಲಾದ ಡಿ.ಸಿ. ವಿದ್ಯುತ್ತನ್ನು ಇನ್‌ವರ್ಟರ್‌ಗಳ ಸಹಾಯದಿಂದ ಎ.ಸಿ. ವಿದ್ಯುತ್‌ನ್ನಾಗಿ ಪರಿವರ್ತಿಸಲಾಗುವುದು.

ಸೌರಶಕ್ತಿ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್‌ನ್ನು ಆ ಕಟ್ಟಡದಲ್ಲಿಯೇ ಸ್ವಯಂ ಬಳಕೆ ಮಾಡಿಕೊಳ್ಳುತ್ತವೆ. ಉತ್ಪಾದಿತ ವಿದ್ಯುತ್ ಪ್ರಮಾಣವು ಕಟ್ಟಡದ ಬಳಕೆಯ ಅಗತ್ಯತೆಗಿಂತ ಹೆಚ್ಚಾಗಿದ್ದಲ್ಲಿ, ಅಂತಹ ಹೆಚ್ಚುವರಿ ಉತ್ಪಾದಿತ ವಿದ್ಯುತ್ತನ್ನು, ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ಜಾಲಕ್ಕೆ ರವಾನೆಯಾಗುತ್ತದೆ. ನಿವ್ವಳ ಮಾಪನ ಆಧಾರದ ಮೇಲೆ ಗ್ರಾಹಕರಿಗೆ ಹಣವನ್ನು ಪಾವತಿಸಲಾಗುತ್ತದೆ ಎಂದು ಸಚಿವ ಶ್ರೀ ಡಿ. ಕೆ. ಶಿವಕುಮಾರ್ ಅವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಮೂಲ ಸೌಕರ್ಯ ವಂಚಿತ ಶಾಲೆಗಳಿಗೆ ಒಂದು ತಿಂಗಳಲ್ಲಿ ಭೇಟಿ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ಸುತ್ತಮುತ್ತ ಇರುವ ಮೂಲಸೌಕರ್ಯದಿಂದ ವಂಚಿತವಾಗಿರುವ ಸರ್ಕಾರಿ ಶಾಲೆಗಳಿಗೆ ಮುಂದಿನ ಒಂದು ತಿಂಗಳಲ್ಲಿ ಭೇಟಿಮಾಡಿ ಪರಿಶೀಲಿಸುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯೆ ವಿಮಲಾ ಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ರಾಜ್ಯಾದ್ಯಂತ ಹಲವು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೂಲ ಸೌಕರ್ಯ ಸಮಸ್ಯೆಗಳಿದ್ದು ಅದಕ್ಕಾಗಿ 6 ಸಾವಿರ ಕೋಟಿ ರೂ. ಅನುದಾನವನ್ನು ಕಾಯ್ದಿರಿಸಲಾಗಿದ್ದು, ಪ್ರತಿ ಜಿಲ್ಲೆಗೆ 80 ರಿಂದ 130 ಕೋಟಿ ರೂ. ಗಳನ್ನು ಒದಗಿಸಲಾಗುವುದೆಂದರು.

ಇತ್ತೀಚೆಗೆ ಪತ್ರಿಕೆಗಳಲ್ಲಿ ಬೆಂಗಳೂರಿನ ಸುತ್ತಮುತ್ತ ಇರುವ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯವಿಲ್ಲವೆಂಬ ವರದಿ ಬಂದಿರುವುದನ್ನು ಸದಸ್ಯೆ ವಿಮಲಾಗೌಡರು ಸಚಿವರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸಚಿವರು ಈ ಎಲ್ಲಾ ಶಾಲೆಗಳಿಗೆ ಒಂದು ತಿಂಗಳಲ್ಲಿ ಭೇಟಿನೀಡಿ ಪರಿಶೀಲಿಸಿ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದೆಂದು ಭರವಸೆ ನೀಡಿದರು.

ರಾಜ್ಯದಲ್ಲಿ ಒಟ್ಟು 44,295 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 4614 ಪ್ರೌಢ ಶಾಲೆಗಳಿದ್ದು ಅದರಲ್ಲಿ 43611 ಸರ್ಕಾರಿ ಪ್ರಾಥಮಿಕ ಶಾಲೆಗಳು ಸ್ವಂತ ಕಟ್ಟಡದಲ್ಲಿ 229 ಬಾಡಿಗೆ ಕಟ್ಟಡದಲ್ಲಿ, 4393 ಸರ್ಕಾರಿ ಪ್ರೌಢ ಶಾಲೆಗಳು ಸ್ವಂತ ಕಟ್ಟಡವನ್ನು 11 ಶಾಲೆಗಳು ಬಾಡಿಗೆ ಕಟ್ಟಡವನ್ನು ಹೊಂದಿವೆ. 2014–15 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ಥಿಗೆ ಸರ್ವ ಶಿಕ್ಷಣ ಅಭಿಯಾನದಿಂದ 8,73,61,000 ರೂ. ಅನುದಾನವನ್ನು ಮಂಜೂರು ಮಾಡಲಾಗಿದ್ದು, ಸೌಲಭ್ಯ ವಂಚಿತ ಎಲ್ಲಾ ಶಾಲೆಗಳಿಗೆ ಮೂಲ ಸೌಕರ್ಯವನ್ನು ಹಂತ, ಹಂತವಾಗಿ ಪೂರೈಸಲಾಗುವುದೆಂದು ಸಚಿವರು ತಿಳಿಸಿದರು.

ಬಿಜಿಪಿ:ಜಿಪಿಆರ್.

# ಕುಲಪತಿಗಳ ನೇಮಕಾತಿಯಲ್ಲಿ ಮೀಸಲಾತಿ ಇಲ್ಲ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ವಿಶ್ವ ವಿದ್ಯಾಲಯಗಳ ಕುಲಪತಿಗಳ ನೇಮಕಾತಿಯಲ್ಲಿ ಮೀಸಲಾತಿ ಇಲ್ಲವೆಂದು ವಿಧಾನ ಪರಿಷತ್ತಿನ ನಾಯಕ ಎಸ್.ಆರ್. ಪಾಟೀಲ್ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ವಿ.ಎಸ್. ಉಗ್ರಪ್ಪ ಅವರು ಕೇಳಿದ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವರ ಪರವಾಗಿ ಉತ್ತರಿಸಿದ ಸಭಾ ನಾಯಕರು ಅವರ ಅರ್ಹತೆ ಸಮದರ್ಶಿತ್ವ ಮತ್ತು

ಸಾಮಾಜಿಕ ನ್ಯಾಯ/ಇವುಗಳನ್ನು ಗಮನದಲ್ಲಿರಿಸಿಕೊಂಡು ಕುಲಪತಿಗಳನ್ನು ನೇಮಿಸಲಾಗುತ್ತದೆ ಆದ್ದರಿಂದ ಕುಲಪತಿಗಳ  ನೇಮಕದಲ್ಲಿ ಮೀಸಲಾತಿಯನ್ನು ಅನುಸರಿಸಲು ಬರುವುದಿಲ್ಲವೆಂದರು.

ವಿಶ್ವವಿದ್ಯಾಲಯದ ಅಧಿನಿಯಮದಡಿ ರಚಿತವಾಗಿರುವ ಶೋಧನಾ ಸಮಿತಿಯು ಶಿಕ್ಷಣ ತಜ್ಞರಾದ ಮೂವರನ್ನು ಆರಿಸಿ ಸರ್ಕಾರಕ್ಕೆ ಸಲ್ಲಿಸುತ್ತದೆ.  ಅದನ್ನು ಸರ್ಕಾರವು ಕುಲಾಧಿಪತಿಗಳಾದ ರಾಜ್ಯಪಾಲರಿಗೆ ಕಳುಹಿಸುತ್ತದೆ, ಅವರು ಮೂವರಲ್ಲಿ ಸರ್ಕಾರದ ಸಹಮತಿಯೊಡನೆ ಒಬ್ಬ ಅರ್ಹರನ್ನು ಕುಲಪತಿಯಾಗಿ ನೇಮಕ ಮಾಡಲಾಗುತ್ತದೆ.  2010–2014 ನೇ ಸಾಲಿನವರೆಗೆ ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆಂದು ಸಚಿವರು ಸದನಕ್ಕೆ ಮಾಹಿತಿ ನೀಡಿದರು.

ಬಿಜಿಪಿ:ಜಿಪಿಆರ್.

## ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ 6ನೇ ವೇತನ ವಿಸ್ತರಣೆ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ಸರ್ಕಾರಿ ನೌಕರರಿಗೆ 6ನೇ ವೇತನ ಸಮಿತಿ ನೀಡಿದ 6, 7 ಮತ್ತು 8ನೇ ಸ್ಥಗಿತ ವೇತನ ಬಡ್ತಿ ಸೌಲಭ್ಯವನ್ನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ ವಿಸ್ತರಿಸುವಂತೆ ಆರ್ಥಿಕ ಇಲಾಖೆಯನ್ನು ಒಪ್ಪಿಸುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ಭರವಸೆ ನೀಡಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಈ ಸೌಲಭ್ಯವನ್ನು ವಿಸ್ತರಿಸಲು ಆರ್ಥಿಕ ಇಲಾಖೆಯು ಸಹಮತಿ ನೀಡುತ್ತಿಲ್ಲ  ಆದಾಗ್ಯೂ ಸರ್ಕಾರವು ಆರ್ಥಿಕ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಅವರನ್ನು ಒಪ್ಪಿಸುವುದಾಗಿ ಸಚಿವರು ತಿಳಿಸಿದರು.

ಅದೇ ರೀತಿ ಸರ್ಕಾರಿ ಮಹಿಳಾ ನೌಕರರಿಗೆ 6 ನೇ ವೇತನ ಸಮಿತಿಯು ನೀಡಿರುವ 180 ದಿನಗಳ ಪ್ರಸೂತಿ ರಜೆಯ ಸೌಲಭ್ಯವನ್ನು ಖಾಸಗಿ ಅನುದಾನಿತ ಮಹಿಳಾ ಸಿಬ್ಬಂದಿಗೂ ವಿಸ್ತರಿಸುವ ಬಗ್ಗೆ ಪರಿಶೀಲನೆ ನಡೆದಿದ್ದು,  ಸರ್ಕಾರಿ ನೌಕರರು ಹಾಗೂ ಇವರ ನಡುವೆ ಇರುವ ತಾರತಮ್ಯವನ್ನು ಸರಿಪಡಿಸಲಾಗುವುದೆಂದು ಸಚಿವರು ತಿಳಿಸಿದರು.

ಬಿಜಿಪಿ:ಜಿಪಿಆರ್.

## ಕೊಡಗಿನ 'ರಾಜಾಸೀಟ್' ಪ್ರವಾಸಿ ತಾಣವಾಗಿ ಅಭಿವೃದ್ಧಿ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ಕೊಡಗು ಜಿಲ್ಲೆಯ ' ರಾಜಾಸೀಟ್ ' ಅನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಮಾಡಲಾಗುವುದೆಂದು ವಿಧಾನ ಪರಿಷತ್ತಿನ ಸಭಾನಾಯಕ ಎಸ್.ಆರ್. ಪಾಟೀಲ್ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಟಿ. ಜಾನ್ ಅವರು ಕೇಳಿದ ಪ್ರಶ್ನೆಗೆ ಪ್ರವಾಸೋದ್ಯಮ ಸಚಿವರ ಪರವಾಗಿ ಉತ್ತರಿಸಿದ ಸಭಾನಾಯಕರು ಆಯವ್ಯಯದಲ್ಲಿ ತಿಳಿಸಿದಂತೆ ರಾಜಾಸೀಟ್ ಅನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರವು 4 ಕೋಟಿ 55 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಸಲ್ಲಿಸಿದೆ ಎಂದು ಮಾಹಿತಿ ನೀಡಿದರು.

ಕೊಡಗು ಜಿಲ್ಲೆಯಲ್ಲಿ ಇಲ್ಲಿಯವರೆಗೆ 22 ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳನ್ನು 1417.52 ಲಕ್ಷ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಅದರಲ್ಲಿ 16 ಕಾಮಗಾರಿಗಳು ಪೂರ್ಣಗೊಂಡಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿ ಹಾಗೂ 4 ಕಾಮಗಾರಿಗಳು ಪ್ರಾರಂಭವಾಗಬೇಕಿದೆ ಎಂದು ತಿಳಿಸಿದರು.

ಬಿಜಿಪಿ:ಜಿಪಿಆರ್.

## ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಗೆ ಅನುಮೋದನೆ

ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)

ಆರ್ಥಿಕ ಇಲಾಖೆಯು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಅನುಮೋದನೆ ನೀಡಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ತಿಳಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿಂದು ಸದಸ್ಯೆ ಜಯಮ್ಮ ಅವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ರಾಜ್ಯಾದ್ಯಂತ 9,511 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 1,137 ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರಕಿದ್ದು, ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಖಾಯಂ ಆಗಿ ಭರ್ತಿಮಾಡಲು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ನಡೆಸಲಾಗಿದೆ. ಹಾಗೆಯೇ ಹೈದರಾಬಾದ್ ಕರ್ನಾಟಕ ಮೀಸಲಾತಿ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಎಸ್.ಸಿ.ಟಿ.ಇ. ನಿಯಮಗಳ ರೀತ್ಯಾ ತಿದ್ದುಪಡಿ ತರಲಾಗುತ್ತಿದ್ದು, ಶೀಘ್ರದಲ್ಲೇ ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಬಿಜಿಪಿ:ಜಿಪಿಆರ್.

# ವಿಪತ್ತು ನಿರ್ವಹಣೆ ಮಾಡುವವರಿಗೆ ಧೈರ್ಯ ಹಾಗೂ ಸಾಹಸ ಮನೋಭಾವ ಅಗತ್ಯ

ರಾಜ್ಯಪಾಲ ಶ್ರೀ ವಾಜುಬಾಯಿ ವಾಲ

**ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)**

ಪ್ರಕೃತಿ ವಿಕೋಪಗಳ ಹಾನಿ ನಿರ್ವಹಣೆಯಲ್ಲಿ ತೊಡಗಿಕೊಳ್ಳುವವರು ಧೈರ್ಯ ಹಾಗೂ ಸಾಹಸ ಮನೋಭಾವ ಹೊಂದಿರುವುದು ಅಗತ್ಯ ಎಂದು ರಾಜ್ಯಪಾಲ ಶ್ರೀ ವಾಜುಬಾಯಿ ವಾಲ ಅವರು ಅಭಿಪ್ರಾಯಪಟ್ಟರು.

ಇಂದು ರಾಷ್ಟ್ರೀಯ ವಿಪತ್ತು ಕಡಿತ ದಿನಾಚರಣೆ ಅಂಗವಾಗಿ ಗೃಹ ರಕ್ಷಕ, ಪೌರ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯ ಆಯೋಜಿಸಿದ್ದ ಸಮಾರಂಭವನ್ನು ತ್ರಿವರ್ಣ ಬಲೂನ್‌ಗಳನ್ನು ಆಗಸಕ್ಕೆ ಹಾರಿಬಿಟ್ಟು ಉದ್ಘಾಟಿಸಿ ಮಾತನಾಡಿದ ಅವರು ಕರ್ನಾಟಕ ರಾಜ್ಯದ ವಿಪತ್ತು ನಿರ್ವಹಣೆಯಲ್ಲಿ ತೊಡಗುವ ಮಾನವ ಸಂಪನ್ಮೂಲ ರಾಷ್ಟ್ರಾದ್ಯಂತ ಉತ್ತಮ ಹೆಸರು ಗಳಿಸಿದೆ. ಕೇವಲ ಕರ್ನಾಟಕ ರಾಜ್ಯದಲ್ಲೇ ಅಲ್ಲ, ಭಾರತದ ಯಾವುದೇ ಪ್ರದೇಶದಲ್ಲಿ ಪ್ರಕೃತಿ ವಿಕೋಪ ಅಥವಾ ತುರ್ತು ಸಂದರ್ಭಗಳು ಎದುರಾದಲ್ಲಿ ಗೃಹ ಇಲಾಖೆ ಸಂಬಂಧಿತ ರಕ್ಷಣದಳ ಮುನ್ನುಗ್ಗಿ ಸೇವೆ ಸಲ್ಲಿಸಬೇಕು ಎಂದು ಕಿವಿ ಮಾತು ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಗೃಹ ಸಚಿವ ಶ್ರೀ ಕೆ.ಜೆ. ಜಾರ್ಜ್ ಅವರು ಮಾತನಾಡಿ ವಿಪತ್ತು ನಿರ್ವಹಣೆ ಕುರಿತು ಜನ ಸಾಮಾನ್ಯರಲ್ಲಿ ವಿಶೇಷವಾಗಿ ಮಕ್ಕಳಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ ಅಭಿಪ್ರಾಯಪಟ್ಟರು. ಈ ನಿಟ್ಟಿನಲ್ಲಿ ಇಲಾಖೆಯು ಹಮ್ಮಿಕೊಂಡಿರುವ ವಿಪತ್ತು ಕಡಿತ ದಿನಾಚರಣೆ ಮತ್ತು ರ್‍ಯಾಲಿ ಕಾರ್ಯಕ್ರಮವು ಮಹತ್ವದ್ದಾಗಿದೆ ಎಂದರು. ಬೃಹತ್ ಮಾನವ ಸಂಪನ್ಮೂಲವನ್ನು ನಿರೀಕ್ಷಿಸುವ ವಿಪತ್ತು ನಿರ್ವಹಣಾ ಕಾರ್ಯ ಯಶಸ್ವಿಯಾಗಲು ಗೃಹ ರಕ್ಷಣಾ, ಪೌರ ರಕ್ಷಣಾ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಮಾತ್ರವಲ್ಲದೆ ನಾಗರಿಕರ ಸಹಭಾಗಿತ್ವವೂ ಮುಖ್ಯ ಎಂದು ಅವರು ಹೇಳಿದರು.

ಸಮಾರಂಭದ ನಂತರ ಅಗ್ನಿ ದುರಂತ ಹಾಗೂ ಬಾಂಬ್ ಸ್ಫೋಟ ಸಂದರ್ಭದಲ್ಲಿ ವಿಪತ್ತು ನಿರ್ವಹಣಾ ಕಾರ್ಯ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಸಮಾರಂಭದಲ್ಲಿ ಗೃಹ ರಕ್ಷಣಾದಳದ ಡಿ.ಜಿ.ಪಿ. ಶ್ರೀ ಓಂಪ್ರಕಾಶ್, ಗೃಹ ರಕ್ಷಣಾ ದಳ ಹಾಗೂ ಪೌರರಕ್ಷಣಾದಳದ ಎ.ಡಿ.ಜಿ.ಪಿ. ಶ್ರೀ ಹೆಚ್.ಎನ್. ಸತ್ಯನಾರಾಯಣರಾವ್ ಅವರು ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ನಗರದ ವಿವಿಧ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಖಾಸಗಿ ಸಂಸ್ಥೆಗಳು ಸ್ವಯಂ ಸೇವಕರಾಗಿ ಪಾಲ್ಗೊಂಡಿದ್ದರು.

# ದಿವಂಗತ ಕೆಂಗಲ್ ಹನುಮಂತಯ್ಯರವರ 107 ನೇ ಜನ್ಮ ದಿನಾಚರಣೆ

**ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)**

**ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಕೆಂಗಲ್ ಹನುಮಂತಯ್ಯರವರ 107ನೇ ಜನ್ಮ ದಿನಾಚರಣೆಯ ಅಂಗವಾಗಿ ಫೆಬ್ರವರಿ 10 ರಂದು ಬೆಳಿಗ್ಗೆ 9.30 ಗಂಟೆಗೆ ವಿಧಾನಸೌಧ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಲಿದ್ದಾರೆ.**

ಪಹೊ:ಜಿಪಿಆರ್.

## ಔಷಧ ವಶ

**ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)**

ಔಷಧ ನಿಯಂತ್ರಣ ಇಲಾಖೆಯ ರಾಜ್ಯ ಗುಪ್ತ ವಾರ್ತಾ ಶಾಖೆಯ ಔಷಧ ಪರಿವೀಕ್ಷಕರು ಮೆ॥ ಡೆಕ್ಸಿಬಿಯೋ ಫಾರ್ಮಾ ಪ್ರೈ.ಲಿ., ರೂರ್ಕಿ–247 661(ಯುಕೆ) ಸಂಸ್ಥೆಯವರು ತಯಾರಿಸಿರುವ **ರಬೇಸ್ಪಾಸ್ (ರಬೇಪ್ರಜೋಲ್ ಸೋಡಿಯಂ ಟ್ಯಾಬ್ಲೆಟ್ಸ್ ಐಪಿ),** ಬ್ಯಾಚ್ ಸಂಖ್ಯೆ: ಡಿಪಿಟಿ1077 ಎಂಬ ಉತ್ತಮ ಗುಣಮಟ್ಟದಲ್ಲವೆಂದು ಘೋಷಿತವಾದ ಸುಮಾರು ರೂ.33,570/–ಮೌಲ್ಯದ ಔಷಧವನ್ನು ಮೆ॥ ತುಮಕೂರು ಫಾರ್ಮಸೂಟಿಕಲ್ಸ್ & ರೀಸರ್ಚ ಲ್ಯಾಬ್ ಪ್ರೈ. ಲಿ., ತುಮಕೂರು–572102 ಸಂಸ್ಥೆಯಿಂದ ವಶಪಡಿಸಿಕೊಂಡಿರುತ್ತಾರೆ.

ಆದ್ದರಿಂದ ಸದರಿ ಬ್ಯಾಚ್ ಸಂಖ್ಯೆಯ ಔಷಧವನ್ನು, ಔಷಧಗಳ ಚಿಲ್ಲರೆ, ಸಗಟು ಮಾರಾಟಗಾರರು, ವೈದ್ಯರು, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂನವರು ದಾಸ್ತಾನು ಮಾಡುವುದಾಗಲೀ, ಮಾರಾಟ ಮಾಡುವುದಾಗಲೀ ಅಥವಾ ಉಪಯೋಗಿಸುವುದಾಗಲೀ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ. ಹಾಗೂ ಸದರಿ ಔಷಧದ ದಾಸ್ತಾನನ್ನು ಹೊಂದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಕ್ಷೇತ್ರದ ಔಷಧ ಪರಿವೀಕ್ಷಕರು ಅಥವಾ ಸಹಾಯಕ ಔಷಧ ನಿಯಂತ್ರಕರ ಗಮನಕ್ಕೆ ತರಲು ಕೋರಿದೆ. ಸಾರ್ವಜನಿಕರು ಈ ಬ್ಯಾಚ್ ಸಂಖ್ಯೆಯ ಔಷಧವನ್ನು ಉಪಯೋಗಿಸಬಾರದೆಂದು ತಿಳಿಸಲಾಗಿದೆ.
ಬಾಬು/ಕೆಎಂ

## Drugs Seized

Bangalore, February 6 (Karnataka Information)

The Drugs Inspector, State Intelligence Branch, Drugs Control Department, Bangalore has seized Not of Standard Quality drug **RABESPAS (Rabeprazole Sodium Tablets IP),** B.No:-DPT- 1077, Mfd By M/s. Dexbio

Pharma Pvt Ltd., Roorkee-247661(UK) from M/s Tumkur Pharmaceuticals & Research Lab PVt. Ltd., Tumkur-572 102 which was worth about Rs. 33,570/-

The Chemists, Wholesalers, Doctors, Hospitals, Nursing Homes are directed not to stock, sell or use this batch of drug and in case, they hold any stock they are requested to intimate the concerned area Drugs Inspector or Assistant Drugs Controller. Further the public are requested not to use this batch of drug.

Babu/km

## ಪುಸ್ತಕ ಮೇಳ ಮುಂದೂಡಿಕೆ

**ಬೆಂಗಳೂರು, ಫೆಬ್ರವರಿ 6 (ಕರ್ನಾಟಕ ವಾರ್ತೆ)**

ಕನ್ನಡ ಪುಸ್ತಕ ಪ್ರಾಧಿಕಾರವು 2015 ರ ಫೆಬ್ರವರಿ 11, 12, 13, 14 ಮತ್ತು 15 ರ ವರೆಗೆ ಒಟ್ಟು ಐದು ದಿನಗಳ ಕಾಲ ಚಾಮರಾಜನಗರದ ಪೇಟೆ ಶಾಲೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ–2015 ನ್ನು ತಾಂತ್ರಿಕ ತೊಂದರೆಗಳಿಂದಾಗಿ ಮುಂದೂಡಲಾಗಿದ್ದು, ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ–2015 ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಬಾಬು/ಕೆಎಂ